# ಅಪ್ಪ-ತಾತನ ಬದುಕೇ ವಸ್ತು



ಮಿಲೋಸ್ ರ್‍ಯಾಡೋವಿಕ್

‘ನನ್ನ ತಾತ ರೈಲು ಚಾಲಕರಾಗಿ ದೊಡ್ಡ ಹೆಸರು ಮಾಡಿದ್ದರು. ನನ್ನಪ್ಪ ಮಾಡಿದ್ದೂ ಅದೇ ಕೆಲಸ. ತಾತ ಆಗಾಗ ಪಾರ್ಟಿ ಮಾಡುತ್ತಿದ್ದರು. ಯಾವಾಗಲೂ ವಯಸ್ಸಾದವರ ಮಧ್ಯೆ ಒಬ್ಬ ಯುವಕ ಇರುತ್ತಿದ್ದ. ಪಾರ್ಟಿ ಮುಗಿದ ಮೇಲೆ ಒಂದು ಕೋಣೆಗೆ ಕರೆದುಕೊಂಡು ಹೋಗಿ, ಯುವಕನಿಗೆ ಪಾಠ ಹೇಳುತ್ತಿದ್ದರು. ಅದೇನು ಎಂದು ನನಗೆ ಆಗ ಗೊತ್ತಾಗಲೇ ಇಲ್ಲ. ಈ ಸಿನಿಮಾ ಮಾಡುವಾಗ ಹುಡುಕಿದೆ. ಹೊಸದಾಗಿ ರೈಲು ಚಾಲಕನಾಗಿ ಕೆಲಸಕ್ಕೆ ಸೇರುವವರಿಗೆ ಪಾರ್ಟಿ ನೆಪದಲ್ಲಿ ಪಾಠ ಹೇಳಿ, ಅಣಿಗೊಳಿಸುತ್ತಿದ್ದರು. ನಾನು ಕಂಡ, ಅನುಭವಿಸಿದ, ಕೇಳಿದ ಸಂಗತಿಗಳನ್ನಿಟ್ಟುಕೊಂಡು ಈ ಚಿತ್ರ ಮಾಡಿದೆ. ಮುಖ್ಯ ಪಾತ್ರಧಾರಿ ಲಜಾರ್ ರಿಸ್ತೊವ್‌ಸ್ಕಿ ಅವರಿಗೂ ರೈಲು ಚಾಲಕರ ಬದುಕಿನ ಪರಿಚಯವಿತ್ತು. ಇಬ್ಬರ ಸಂವೇದನೆಗಳು ಹೊಂದಿಕೆಯಾಗಿ ಈ ಸಿನಿಮಾ ರೂಪುಗೊಂಡಿತು’ ಎಂದು ನಿರ್ದೇಶಕ ಮಿಲೋಸ್ ರ್‍ಯಾಡೋವಿಕ್ ಸಂದರ್ಶನವೊಂದರಲ್ಲಿ ಹೇಳಿಕೊಂಡಿದ್ದರು. ಈ ಚಿತ್ರದ ಕಥೆ ಗಟ್ಟಿಗೊಳಿಸಲೆಂದು ಅವರು ನಾಲ್ಕು ವರ್ಷ ಸಂಶೋಧನೆ ಮಾಡಿದ್ದಾರೆ. ರೈಲು ಚಾಲಕರ ಜತೆ ಕುಳಿತು ಲೆಕ್ಕವಿಲ್ಲಷ್ಟು ಸಲ ಪ್ರಯಾಣ ಮಾಡಿದ್ದಾರೆ. 1987ರಲ್ಲಿ ಕಿರುಚಿತ್ರಕ್ಕಾಗಿ ಕಾನ್ ಚಿತ್ರೋತ್ಸವದ ‘ಗೋಲ್ಡನ್ ಪಾಮ್’ ಪ್ರಶಸ್ತಿಗೆ ಭಾಜನರಾದವರು ಮಿಲೋಸ್ ರ್‍ಯಾಡೋವಿಕ್. 2003ರಲ್ಲಿ ಸರಜೆವೊ ಚಿತ್ರೋತ್ಸವದಲ್ಲಿ ಅವರ ‘ಸ್ಮಾಲ್ ವರ್ಲ್ಡ್’ ಚಿತ್ರಕ್ಕೆ ತೀರ್ಪುಗಾರರ ವಿಶೇಷ ಪ್ರಶಸ್ತಿ ಸಂದಿತು. ‘ಫಾಲಿಂಗ್ ಇನ್ ದಿ ಪ್ಯಾರಡೈಸ್’ ಅವರ ಇನ್ನೊಂದು ಪ್ರಮುಖ ಚಿತ್ರ. ಈಗ ಮಿಲೋಸ್ ರ್‍ಯಾಡೋವಿಕ್ ವಯಸ್ಸು 64.

ಹುಡುಗ ಅನಾಥಾಶ್ರಮದಲ್ಲಿ ಇರುವವನೆಂದು ಗೊತ್ತಾಗುತ್ತದೆ. ಮಾನವೀಯ ಮುಖಗಳನ್ನೇ ಕಾಣದೆ ಹತಾಶನಾದ ಆ ಬಾಲಕನನ್ನು ಇಲಿಜ ಸಾಕುತ್ತಾನೆ. ಕೆಲವೇ ನಿಮಿಷಗಳಲ್ಲಿ ಸಿನಿಮಾದ ಕತೆ ಒಂಬತ್ತು ವರ್ಷ ಮುಂದಕ್ಕೆ ಜಿಗಿಯುತ್ತದೆ. ಆ ಬಾಲಕ ಸಿಮ ಈಗ ಪ್ರೌಢ, ಇಲಿಜನ ದತ್ತು ಪುತ್ರ.

ಪದವಿಯ ನಂತರ ಸಿಮ ತನಗೆ ರೈಲು ಚಾಲಕ ಆಗಬೇಕೆಂಬ ಬಯಕೆ ಇದೆ ಎಂದಾಗ ಇಲಿಜ ಒಪ್ಪುವುದಿಲ್ಲ. ಮುಗ್ಧ ಜನರ ಕೊಲೆಗಡುಕನಾಗಿ ತನ್ನಂತೆ ದಶಕಗಟ್ಟಲೆ ಮಾನಸಿಕ ತುಮುಲದಲ್ಲಿ ಅವನೂ ನರಳುವುದು ಬೇಡ ಎನ್ನುವುದು ಕಾಳಜಿ. ಅದಕ್ಕೇ ಮಗನನ್ನು ರೈಲು ತೊಳೆಯುವ ಕೆಲಸಕ್ಕೆ ಹಚ್ಚುತ್ತಾನೆ. ಮಹತ್ವಾಕಾಂಕ್ಷೆಗೆ ಹೇಗೆತಾನೆ ಕಟ್ಟೆ ಹಾಕಲಾದೀತು? ಅಪ್ಪನ ಸ್ನೇಹಿತ ರೈಲು ಓಡಿಸುವುದನ್ನು ಕಲಿಸುವುದಾಗಿ ಪುಸಲಾಯಿಸಿ ಹತ್ತಿಸಿಕೊಳ್ಳುತ್ತಾನೆ. ‘ಇದು ಬ್ರೇಕ್, ಇದು ವೇಗವರ್ಧಕ, ವೇಗ ಕಡಿಮೆ ಮಾಡಲು ಇದನ್ನು ಎಳೆಯಬೇಕು, ಸ್ಟೀರಿಂಗ್ ಮೂಲಕ ನಿಯಂತ್ರಿಸಬೇಕು’ ಎಂದು ಕೆಲವೇ ನಿಮಿಷಗಳಲ್ಲಿ ಪಟಪಟನೆ ಹೇಳಿ, ಸ್ಟೀರಿಂಗನ್ನು ಹುಡುಗನ ಕೈಗೇ ಇತ್ತು ಅವನು ಒಳಗೆ ಹೋಗಿಬಿಡುತ್ತಾನೆ. ಕಾರೊಂದನ್ನು ಗುದ್ದುವ ದೊಡ್ಡ ದುರಂತ ತಪ್ಪುತ್ತದೆ.

ಇಲಿಜನಿಗೆ ಮತ್ತೆ ಚಿಂತೆ. ಮಗನಿಗೆ ರೈಲು ಓಡಿಸುವುದನ್ನು ಕಲಿಸಹೊರಟ ಸ್ನೇಹಿತನನ್ನು